# ಮತಾಂತರ ನಿಷೇದ ಕಾಯಿದೆ - ಪ್ರಭುತ್ವದ ಪೂರ್ವಗ್ರಹಗಳು

**ಮಂಜುನಾಥ** ಸಂಶೋಧನಾರ್ಥಿ ರಾಜ್ಯಶಾಸ್ತ್ರ ವಿಭಾಗ ದಾವಣಗೆರೆ ವಿಶ್ವವಿದ್ಯಾಲಯ.
**ಡಾ ಪ್ರವೀಣ್. ಟಿ.ಎಲ್** ಸಹಾಯಕ ಪ್ರಾಧ್ಯಾಪಕರು ರಾಜ್ಯಶಾಸ್ತ್ರ ವಿಭಾಗ ದಾವಣಗೆರೆ ವಿಶ್ವವಿದ್ಯಾಲಯ.

**ಪೀಠಿಕೆ:**
ಭಾರತದಲ್ಲಿ ಪ್ರಭುತ್ವಗಳು ರಿಲಿಜನ್‌ಗಳ ಜೊತೆ ವ್ಯವಹರಿಸುವ ಕುರಿತು ಗೊಂದಲದಲ್ಲಿಯೇ ಇರುವುದು ಸ್ಪಷ್ಟ.ಸ್ವತಂತ್ರ ಪೂರ್ವದ ಬ್ರಿಟಿಷರ ಪ್ರಭುತ್ವ ರಿಲಿಜನ್ನಿನ ಸ್ವಾತಂತ್ರ್ಯದ ಹೆಸರಿನಲ್ಲಿ ಮತಾಂತರಕ್ಕೆ ಪೂರಕ ವಾತಾವರಣವನ್ನು ಸೃಷ್ಟಿಸಿದರು.ಸ್ವತಂತ್ರ ನಂತರ ಭಾರತೀಯ ಪ್ರಭುತ್ವವು ಅದನ್ನು ಮುಂದುವರೆಸಿತು ಎನ್ನಬಹುದು.ಆದರೆ ಮತಾಂತರದ ಪರಿಣಾಮವನ್ನು ಎದುರಿಸುವುದು ಪ್ರಭುತ್ವಕ್ಕೆ ಸವಾಲಾಗಿ ಪರಿಣಮಿಸಿದೆ. ಹಾಗಾಗಿ ಮತಾಂತರವನ್ನು ನಿಷೇದಿಸುವ ಕುರಿತು ನಿರ್ಧಾರವನ್ನು ತೆಗೆದುಕೊಳ್ಳುವ ಅನಿವಾರ್ಯತೆ ಎದುರಾಯಿತು. ಈ ನಿರ್ಧಾರದಿಂದ ಮತಾಂತರ ಪ್ರಕ್ರಿಯೆಗಳು ನಿಲ್ಲುತ್ತವೆ ಎಂಬುದು ಪ್ರಭುತ್ವದ ನಂಬಿಕೆ.ಅAತಹ ನಂಬಿಕೆಯನ್ನು ಹೊಂದಿದವರಲ್ಲಿ ಕರ್ನಾಟಕ ಕೂಡ ಒಂದು. ಹಾಗಾಗಿ ಇತ್ತೀಚೆಗೆ 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಅಧಿನಿಮಯ ೨೦೨೨' ನ್ನು ಜಾರಿಗೆ ತಂದಿದೆ. ಆದರೆ ಮತ ಪ್ರಚಾರಕ್ಕೆ, ಮತಾಂತರಕ್ಕೆ ಅವಕಾಶಗಳನ್ನು ನೀಡಿರುವ ಸರ್ಕಾರವೇ ಮತಾಂತರವನ್ನು ನಿಷೇಧಿಸಲು ಕ್ರಮಕೈಗೊಳ್ಳುವಂತಾಗಿದೆ. ಹಾಗಾದರೆ ಮತಾಂತರ ನಿಷೇಧ ಕಾಯಿದೆಯು ರಿಲಿಜನ್ನಿನ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಲಿದೆಯೇ? ಅಥವಾ ಕಾಯಿದೆಯ ಸ್ವರೂಪದಲ್ಲಿಯೇ ಹಲವು ಮಿತಿಗಳಿವೆಯೇ ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಲಾಗುವುದು.

ಮುಖ್ಯಪದಗಳು : ಮತಾಂತರ, ರಿಲಿಜನ್, ರಿಲಿಜನ್ ಸ್ವಾತಂತ್ರ್ಯ ಹಕ್ಕು ಕಾಯಿದೆ, ಸಂವಿಧಾನ, ಸೆಕ್ಯುಲರ್ ಪ್ರಭುತ್ವ.

## ೧. ಸೆಕ್ಯುಲರ್ ಪ್ರಭುತ್ವ ಮತ್ತು ರಿಲಿಜನ್ನಿನ ಸ್ವಾತಂತ್ರ್ಯ:

ಭಾರತದ ಸೆಕ್ಯುಲರ್ ಪ್ರಭುತ್ವವು ತನ್ನಲ್ಲಿನ ವೈವಿಧ್ಯಮಯ 'ರಿಲಿಜನ್ನು' ಗಳನ್ನು ಒಳಗೊಳ್ಳಲು ಪ್ರಯತ್ನಿಸುತ್ತದೆ. ಸಂವಿಧಾನದ ೨೫-೨೮ ನೇ ವಿಧಿಗಳಲ್ಲಿ ರಿಲಿಜನ್ನಿನ ಸ್ವಾತಂತ್ರ್ಯವನ್ನು ಒದಗಿಸಿದೆ. ಇದು ವ್ಯಕ್ತಿಗಳಿಗೆ ತಮ್ಮ ರಿಲಿಜನ್ ಅನ್ನು ಮುಕ್ತವಾಗಿ ಪ್ರತಿಪಾದಿಸುವ, ಆಚರಿಸುವ ಮತ್ತು ಪ್ರಚಾರ ಮಾಡುವ ಹಕ್ಕನ್ನು ಖಾತರಿಪಡಿಸುತ್ತದೆ, ಆದರೆ ಯಾವುದೇ ನಿರ್ದಿಷ್ಟ ನಂಬಿಕೆಯನ್ನು ರಾಜ್ಯವು ಪ್ರತಿಪಾಧಿಸುವುದನ್ನು ವಿರೋಧಿಸುತ್ತದೆ.ಈ ಸಾಂವಿಧಾನಿಕ ಸುರಕ್ಷತೆಗಳ ಹೊರತಾಗಿಯೂ, ರಿಲಿಜನ್ನಿನ ಸ್ವಾತಂತ್ರ್ಯ ಮತ್ತು ರಾಜ್ಯದ ತಟಸ್ಥತೆಯ ನಡುವಿನ ಸಮತೋಲನಕ್ಕೆ ದಕ್ಕೆ ಉಂಟಾಗುತ್ತದೆ.ಉದಾಹರಣೆಗೆ, ಬಲಾತ್ಕಾರದ ಮತಾಂತರವನ್ನು ತಡೆಗಟ್ಟುವ ಗುರಿಯನ್ನು ಹೊಂದಿರುವ ಮತಾಂತರ-ವಿರೋಧಿ ಕಾನೂನುಗಳು ಆರ್ಟಿಕಲ್ ೨೫ ರ ಹಕ್ಕುಗಳನ್ನು ಉಲ್ಲಂಘಿಸುತ್ತವೆ ಎಂಬ ಟೀಕೆಗಳು ವ್ಯಾಪಕವಾಗಿವೆ. ಈ ಎರಡು ಧೃವಗಳನ್ನು ವಿಶ್ಲೇಷಿಸಿ ನೋಡುವ ಅಗತ್ಯವಿದೆ.

## ರಿಲಿಜನ್ನಿನ ಸ್ವಾತಂತ್ರ್ಯದ ಹಕ್ಕು:

ಸಂವಿಧಾನದ ೨೫, ೨೬, ೨೭ ರಿಂದ ೨೮ ರವರೆಗಿನ ವಿಧಿಗಳುರಿಲಿಜನ್ನಿನ ಸ್ವಾತಂತ್ರ್ಯದ ಹಕ್ಕನ್ನು ಭಾರತೀಯರಿಗೆ ನೀಡುತ್ತವೆ. ಅನುಚ್ಛೇದ ೨೫: ಆತ್ಮ ಸಾಕ್ಷಿ ಹೊಂದುವ, ರಿಲಿಜನ್ನನ್ನು ಆಚರಿಸುವ, ಪ್ರಸಾರ ಮಾಡುವ ಸ್ವಾತಂತ್ರ್ಯ. ಅನುಚ್ಛೇಧ ೨೬: ಧಾರ್ಮಿಕ ವ್ಯವಹಾರಗಳ ಆಡಳಿತದ ಸ್ವಾತಂತ್ರ್ಯ. ಅನುಚ್ಛೇದ ೨೭: ಕರ ನೀಡುವುದರಿಂದ ಮುಕ್ತಿ ಅನುಚ್ಛೇದ ೨೮: ಅನುದಾನಿತ ಸಂಸ್ಥೆಗಳಲ್ಲಿ ಧಾರ್ಮಿಕ ಬೋದನೆ ನಿಷೇಧ. ಮುಖ್ಯವಾಗಿ ಇವುಗಳಲ್ಲಿ ಮೊದಲನೆಯ ಅನುಚ್ಛೇದ ೨೫: ಆತ್ಮ ಸಾಕ್ಷಿ ಹೊಂದುವ, ಧರ್ಮವನ್ನು ಆಚರಿಸುವ, ಪ್ರಸಾರ ಮಾಡುವ ಸ್ವಾತಂತ್ರ್ಯ. ಈ ಹಕ್ಕನ್ನು ಗಮನಿಸಿ.ಈ ಅನುಚ್ಛೇಧವು ಪ್ರತಿಯೋಬ್ಬ ವ್ಯಕ್ತಿಗೆ ಧಾರ್ಮಿಕ ಹಕ್ಕನ್ನು ನೀಡಿದೆ. ಹಾಗೂ ೨೫(೧) ರಲ್ಲಿ ೧. ಪ್ರತಿಯೊಬ್ಬ ವ್ಯಕ್ತಿಗೆ ಆತ್ಮಸಾಕ್ಷಿಯನ್ನು ಹೊಂದುವ ಸ್ವಾತಂತ್ರ್ಯ ಅಲ್ಲದೆ ಮುಕ್ತವಾಗಿ ಯಾವುದೇ ಧರ್ಮದವನೆಂದು ಬಹಿರಂಗವಾಗಿ ಹೇಳಿಕೊಳ್ಳುವ, ಧರ್ಮವನ್ನು ಆಚರಿಸುವ ಹಾಗೂ ಧರ್ಮವನ್ನು ಪ್ರಸಾರ ಮಾಡುವ ಸ್ವಾತಂತ್ರ್ಯವನ್ನು ನೀಡಲಾಗಿದೆ.ಧರ್ಮಎಂದರೆ ಇಲ್ಲಿ ರಿಲಿಜನ್ ಎಂಬರ್ಥದಲ್ಲಿ. ಇಲ್ಲಿ 'ತನ್ನ ಧರ್ಮವನ್ನು ಪ್ರಸಾರ ಮಾಡುವ ಸ್ವಾತಂತ್ರ್ಯ' ವನ್ನು ಎಲ್ಲಾ ರಿಲಜನ್ನುಗಳು ಬಳಸಿಕೊಳ್ಳುತ್ತಿವೆಯೇ? ಅಥವಾ ಕೆಲವೇ ರಿಲಿಜನ್ನುಗಳು ಅದರಲ್ಲಿ ತೊಡಗಿಕೊಂಡಿವೆಯೇ?ಪ್ರಶ್ನೆಯು ಅತ್ಯಂತ ಪ್ರಮುಖವಾಗಲಿದೆ.ಏಕೆಂದರೆ ಪ್ರಮುಖವಾಗಿ ಕ್ರಿಶ್ಚಿಯಾನಿಟಿ ಇದನ್ನು ವ್ಯಾಪಕವಾಗಿ


Copyright @ 2025 Author

ಬಳಸಿಕೊಳ್ಳುತ್ತಿದೆ.ಮಾತ್ರವಲ್ಲ ಹಲವು ಆಮಿಷಗಳನ್ನು ಒಡ್ಡುವ ಮೂಲಕ ಭಾರತೀಯರನ್ನು ಮತಪರಿವರ್ತನೆಗೆ ಒಳಪಡಿಸುತ್ತಿದೆ ಎಂಬ ಗಂಭೀರವಾದ ಆರೋಪಕ್ಕೆ ಕಾರಣವಾಗಿದೆ. ಹಾಗಾಗಿ ಪ್ರಭುತ್ವವೇ ಇದನ್ನು ತಡೆಗಟ್ಟಲು ಮುಂದಾಗಬೇಕಾದ ಸ್ಥಿತಿ ನಿರ್ಮಾಣವಾಯಿತು. ಆಗ ಭಾರತದಲ್ಲಿ ಸುಮಾರು ರಾಜ್ಯಗಳು 'ಮತಾಂತರ ನಿಷೇದ ಕಾಯಿದೆ' ಗಳನ್ನು ಜಾರಿಗೆ ತರಲು ಮುಂದಾದುದು ಈಗ ಇತಿಹಾಸ. ಆದರೆ ಸರ್ಕಾರದ ಈ ನಡೆಯನ್ನು ಹಲವರು ಗಂಭೀರವಾಗಿ ವಿರೋಧಿಸಿದ್ದು ಇದೆ.ಇತ್ತೀಚೆಗೆ ಕ್ರಿಶ್ಚಿಯನ್ ಪಾದ್ರಿ, ಆರ್ಚ್‌ಬಿಷಪ್ ಪೀಟರ್ ಮಾಚಾದೋ ಹೀಗೆ ಹೇಳುತ್ತಾರೆ.

ಮತಾಂತರ ನಿಷೇದ ಮಸೂದೆಯ ಹೆಸರಿನಲ್ಲಿ ಕ್ರöÊಸ್ತ ಧರ್ಮಿಯರನ್ನು ನಿಯಂತ್ರಿಸುವ ಪ್ರಯತ್ನ ಆರಂಭವಾಗಿದೆ, ಕ್ರöÊಸ್ತ ಮಿಷನರಿಗಳು ನಡೆಸುತ್ತಿರುವ ಶಾಲೆ, ಆಸ್ಪತ್ರೆಗಳು ಮತಾಂತರ ನಡೆಯುತ್ತಿರುವುದಕ್ಕೆ ಸಾಕ್ಷಿ ನೀಡಿದರೆ ಅಂತಹ ಸಂಸ್ಥೆಗಳನ್ನು ಮುಚ್ಚಲು ಸಿದ್ಧ.(ಪ್ರಜಾವಾಣಿ. ಡಿಸೆಂಬರ್. ೧೦.೨೦೨೨.).

ಮತಾಂತರ ನಿಷೇದ ಕಾಯಿದೆಯಿಂದ ಕ್ರಿಶ್ಚಿಯಾನಿಟಿಯಂತಹ ರಿಲಿಜನ್ನುಗಳಿಗೆ ಮಾತ್ರತೊಂದರೆಯಾಗುತ್ತಿದೆಯೇ?ಏಕೆ ಉಳಿದ ಅದರಲ್ಲೂ ಭಾರತೀಯ 'ರಿಲಿಜನ್ನು (ಧರ್ಮ)'ಗಳು ಈ ರೀತಿ ಪ್ರತಿಕ್ರಿಯಿಸುವುದಿಲ್ಲ?ಇವುಗಳು ರಿಲಿಜನ್ನಿನ ಗುಣಲಕ್ಷಣಗಳನ್ನೇ ಹೊಂದಿರುವ ಸಾಧ್ಯತೆ ಇಲ್ಲವೆಂದೆನಿಸುತ್ತದೆ.ಅಥವಾ ಈ ಕಾಯಿದೆಯು ಭಾರತೀಯ 'ರಿಲಿಜನ್ನು(ಧರ್ಮ)'ಗಳಿಗೆ ಅನುಕೂಲಮಾಡಿಕೊಟ್ಟು, ಕ್ರಿಶ್ಚಿಯಾನಿಟಿಯಂತಹ ರಿಲಿಜನ್ನುಗಳಿಗೆ ಮಾತ್ರ ತೊಂದರೆ ಮಾಡುತ್ತಿರಬೇಕು. ಹಾಗಾಗಿ ಈ ಕಾಯಿದೆಯ ಸ್ವರೂಪವನ್ನು ಒಮ್ಮೆ ಗಮನಿಸಿ, ಈ ಚರ್ಚೆಯನ್ನು ಮುಂದುವರೆಸುವುದು ಒಳಿತು.

**೨. ಮತಾಂತರ ನಿಷೇಧ ಕಾಯಿದೆಯ ಸ್ವರೂಪ :**

ಭಾರತದ ಸಂಪ್ರದಾಯಗಳನ್ನು ಭ್ರಷ್ಟವೆಂದು ಗುರುತಿಸಿ ಮತ ಪರಿವರ್ತನೆಗೆ ಕೈಹಾಕಿದ ಐರೋಪ್ಯರು, ವಸಾಹತು ಪೂರ್ವ ಕಾಲದಿಂದಲೂ ಇಂದಿನವರೆಗೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರಯತ್ನಿಸುತ್ತಲೇ ಬರುತ್ತಿದ್ದಾರೆ.ಇದನ್ನು ತಡೆಯುವ ಸಣ್ಣಪುಟ್ಟ ಪ್ರಯತ್ನಗಳು ನಡೆದಿವೆ ಎನ್ನಬಹುದು.'ಕ್ರಿಶ್ಚಿಯನ್ ಧರ್ಮಪ್ರಚಾರಕರ ಪ್ರಭಾವದಿಂದ ತಮ್ಮ ಧಾರ್ಮಿಕ ಗುರುತನ್ನು ಕಾಪಾಡಿಕೊಳ್ಳಲು ಹಿಂದೂ ಸಂಸ್ಥಾನಗಳು ೧೯೩೦ ಮತ್ತು ೧೯೪೦ರ ದಶಕಗಳಲ್ಲಿ ಮತಾಂತರ ವಿರೋಧಿ ಕಾನೂನುಗಳನ್ನು ಪರಿಚಯಿಸಿದವು. ಹಿಂದೂ ಸಮುದಾಯದ ಕೆಳ ಜಾತಿಗಳು ಮತ್ತು ಬುಡಕಟ್ಟುಗಳನ್ನು ಧರ್ಮಪ್ರಚಾರಕರ ಮತಾಂತರದಿAದ ರಕ್ಷಿಸಲು ೧೯೩೬ರ ರಾಯಗಢ ರಾಜ್ಯ ಮತಾಂತರ ಕಾಯ್ದೆಯನ್ನು ರಾಯಗಢದ ಮುಖ್ಯಸ್ಥ ಚಕ್ರಧರ್ ಸಿಂಗ್ ಜಾರಿಗೆ ತಂದರು.ಇತರ ಮತಾಂತರ ವಿರೋಧಿ ಕಾನೂನುಗಳೆಂದರೆ ೧೯೪೨ ರ ಪಾಟ್ನಾ ಫ್ರೀಡಮ್ ಆಫ್ ರಿಲಿಜನ್ ಆಕ್ಟ್, ೧೯೪೫ ರ ಸರ್ಗುಜಾ ಸ್ಟೇಟ್ ಅಪೋಸ್ಟಸಿ ಆಕ್ಟ್, ೧೯೪೬ ರ ಉದಯಪುರ ಸ್ಟೇಟ್ ಆಂಟಿ-ಕನ್ವರ್ಷನ್ ಆಕ್ಟ್ ಮತ್ತು ಅಂತಹ ಅನೇಕ ಕಾನೂನುಗಳನ್ನು ರಾಜಪ್ರಭುತ್ವಗಳು ಜಾರಿಗೆ ತಂದವು ಮತ್ತು ಅವುಗಳನ್ನು ಭಾರತದಾದ್ಯಂತ ಕಾಣಬಹುದು.ಕ್ರೈಸ್ತ ಧರ್ಮಪ್ರಚಾರಕರ ತ್ವರಿತ ಮತಾಂತರಗಳಿAದ ತಮ್ಮ ನಾಗರಿಕರನ್ನು ರಕ್ಷಿಸಲು ರಾಜರು ಬಯಸಿದ್ದರಿಂದ ಈ ಕಾನೂನುಗಳನ್ನು ರಚಿಸಲಾಯಿತು' ಎನ್ನುವ ವಿವರಣೆಗಳಿವೆ.

ಪ್ರಸ್ತುತ, ಭಾರತದಲ್ಲಿ ಕೇವಲ ಒಂಬತ್ತು ರಾಜ್ಯಗಳು ಮಾತ್ರ ಮತಾಂತರ ವಿರೋಧಿ ಕಾನೂನುಗಳನ್ನು ಹೊಂದಿವೆ. ಜಾರ್ಖಂಡ್, ಒಡಿಶಾ, ಅರುಣಾಚಲ ಪ್ರದೇಶ, ಉತ್ತರಾಖಂಡ, ಛತ್ತೀಸ್‌ಗಢ, ಗುಜರಾತ್ ಮತ್ತು ಹಿಮಾಚಲ ಪ್ರದೇಶಗಳು ಮತಾಂತರ ವಿರೋಧಿ ಕಾನೂನನ್ನು ಜಾರಿಗೆ ತಂದ ರಾಜ್ಯಗಳಾಗಿವೆ. ಹಾಗೂ ಇತ್ತಿಚೇಗೆ ಈ ಪಟ್ಟಿಗೆ ಕರ್ನಾಟಕವು ಸೇರಿಕೊಂಡಿದೆ.ಬಲವAತದ ಮತಾಂತರವನ್ನು ವಿರೋಧಿಸುವ ಈ ರಾಜ್ಯಗಳು ಸೆಕ್ಯುಲರ್ ತತ್ವದ ಅಡಿಯಲ್ಲಿಯೇ ಅಳವಡಿಸಿಕೊಂಡಿವೆ ಎನ್ನುವುದು ಅವುಗಳ ಸ್ವರೂಪದಲ್ಲಿಯೇ ಸ್ಪಷ್ಟವಾಗುತ್ತದೆ.

೧೯೬೭ ರಲ್ಲಿ ಒರಿಸ್ಸಾ ರಾಜ್ಯ :ಈ ರಾಜ್ಯವು ಒರಿಸ್ಸಾ ರಿಲಿಜನ್ ಸ್ವಾತಂತ್ರö್ಯದ ಕಾಯಿದೆ ೧೯೬೭ ಎಂಬ ಕಾಯಿದೆಯನ್ನು ಜಾರಿಗೆ ತಂದಿದೆ. ಹಾಗೆಯೇ "ಬಲವಂತದ ಮತಾಂತರದ" ಅಪರಾದಕ್ಕೆ ಒಂದು ವರ್ಷದವರೆಗೆ ಜೈಲು ಶಿಕ್ಷೆ, ೫,೦೦೦ ರೂಪಾಯಿಗಳವರೆಗೆ ದಂಡ ಅಥವಾ ಎರಡನ್ನೂ ವಿಧಿಸುತ್ತದೆ. ಅಪರಾಧವು ಅಪ್ರಾಪ್ತ ವಯಸ್ಕ, ಮಹಿಳೆ ಅಥವಾ Sಅ/Sಖಿ ಗೆ ಸೇರಿದ ವ್ಯಕ್ತಿಯ ವಿರುದ್ಧ ಎಸಗಿದರೆ, ಜೈಲು ಶಿಕ್ಷೆಯನ್ನು ಗರಿಷ್ಠ ಎರಡು ವರ್ಷಗಳವರೆಗೆ ಹೆಚ್ಚಿಸಬಹುದು ಮತ್ತು ದಂಡವನ್ನು ೧೦,೦೦೦ ರೂಪಾಯಿಗಳಿಗೆ ಹೆಚ್ಚಿಸಬಹುದು.

೧೯೬೮ ರಲ್ಲಿ ಮಧ್ಯಪ್ರದೇಶ : ಮಧ್ಯಪ್ರದೇಶ ರಿಲಿಜನ್ ಸ್ವಾತಂತ್ರö್ಯದ ಕಾಯಿದೆ- ೧೯೬೮ ಭಾರತದ ರಾಜ್ಯದಲ್ಲಿ ಜಾರಿಗೆ ತಂದ ಎರಡನೇ ಮತಾಂತರ ವಿರೋಧಿ ಶಾಸನವಾಗಿದೆ. ಈ ಕಾಯಿದೆಯು ಇತರ ರಾಜ್ಯಗಳಲ್ಲಿ ಇರುವ ಇಂತಹ ಮತಾಂತರ-ವಿರೋಧಿ ಶಾಸನಗಳಿಗೆ ಬಹುತೇಕ ಒಂದೇ ರೀತಿಯದ್ದಾಗಿದೆ, 'ಪ್ರಚೋದನೆ' ಪದದ ವ್ಯತ್ಯಾಸವನ್ನು ಹೊರತುಪಡಿಸಿ 'ಆಲೋಚನೆ' ಎಂಬ ಪದವನ್ನು ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್ ೨(ಎ) ನಲ್ಲಿ ವ್ಯಾಖ್ಯಾನಿಸಲಾಗಿದೆ.ವಸ್ತು ಅಥವಾ ಹಣದ ಸ್ವರೂಪದ ಪ್ರಯೋಜನ, ಉಡುಗೊರೆ ಅಥವಾ ಪ್ರಲೋಭನೆಯ ಮೂಲಕ ಯಾವುದೇ ವ್ಯಕ್ತಿಯು ನೇರವಾಗಿ ಅಥವಾ ಬಲವಂತ,


Copyright @ 2025 Author

ವಂಚನೆ, ಪ್ರಚೋದನೆಯಂತ ವಿಧಾನಗಳ ಮೂಲಕ ಬೇರೆಯವರನ್ನು ಮತಾಂತರಿಸಲು ಪ್ರಯತ್ನಿಸಬಾರದು ಮತ್ತು ಅಂತಹ ಪ್ರಯತ್ನಕ್ಕೆ ಯಾವುದೇ ವ್ಯಕ್ತಿ ಪ್ರೋತ್ಸಾಹ ನೀಡಬಾರದು.

೧೯೭೮ ರಲ್ಲಿ ಅರುಣಾಚಲ ಪ್ರದೇಶ :ಅರುಣಾಚಲ ಪ್ರದೇಶ ರಿಲಿಜನ್ ಸ್ವಾತಂತ್ರö್ಯ ಕಾಯಿದೆಯಲ್ಲಿ ೧೯೭೮ ರಲ್ಲಿ ಜಾರಿಗೆ ತಂದಿದೆ. ಈ ಕಾನೂನುಗಳು ಒರಿಸ್ಸಾ ಮತ್ತು ಮಧ್ಯಪ್ರದೇಶದಲ್ಲಿ ಜಾರಿಗೆ ತಂದ ಕಾನೂನುಗಳಿಗಿಂತ ಭಿನ್ನವಾಗಿ ಏನು ಇಲ್ಲ. ೧೯೭೮ ರ ಅಕ್ಟೋಬರ್ ೨೫ ರಂದು ಈ ಕಾನೂನು ರಾಷ್ಟ್ರಪತಿಗಳಿಂದ ಅಂಗೀಕರಿಸಲಾಯಿತು.

೨೦೦೦ ರಲ್ಲಿ ಛತ್ತೀಸ್‌ಗಢ :ನವೆಂಬರ್ ೨೦೦೦ ರಲ್ಲಿ ಛತ್ತೀಸ್‌ಗಢ ರಾಜ್ಯವನ್ನು ಮಧ್ಯಪ್ರದೇಶದಿಂದ ಬೇರ್ಪಡಿಸಿ ಸ್ಥಾಪಿಸಲಾಯಿತು. ಛತ್ತೀಸ್‌ಗಢವು ಮಧ್ಯಪ್ರದೇಶ ರಾಜ್ಯದ ಮತಾಂತರ-ವಿರೋಧಿ ಕಾನೂನನ್ನು ಉಳಿಸಿಕೊಂಡಿದೆ ಮತ್ತು ಛತ್ತೀಸ್‌ಗಢ ರಿಲಿಜನ್ನಿನ ಸ್ವಾತಂತ್ರö್ಯ ಕಾಯಿದೆ- ೧೯೬೮ ಶೀರ್ಷಿಕೆಯಡಿಯಲ್ಲಿ ಅದನ್ನು ಅಳವಡಿಸಿಕೊಂಡಿದೆ.ನAತರ ೨೦೦೬ ರಲ್ಲಿ, ರಾಜ್ಯ ಶಾಸಕಾಂಗವು ಈ ಕಾಯಿದೆಯನ್ನು ಇನ್ನಷ್ಟು ಕಠಿಣಗೊಳಿಸಲು ತಿದ್ದುಪಡಿ ಮಾಡಿತು.

೨೦೦೨ ರಲ್ಲಿ ತಮಿಳುನಾಡು : ತಮಿಳುನಾಡು ರಿಲಿಜನ್ನುಗಳ ಬಲವಂತದ ಮತಾಂತರ ನಿಷೇಧ ಕಾಯಿದೆ ೨೦೦೨ ರ ಪ್ರಕಾರ ಯಾವುದೇ ವ್ಯಕ್ತಿಯನ್ನು ಬಲವಂತವಾಗಿ ಅಥವಾ ಆಮಿಷದ ಮೂಲಕ ಅಥವಾ ಯಾವುದೇ ಮೋಸದ ವಿಧಾನದಿಂದ ನೇರವಾಗಿ ಮತಾಂತರಗೊಳಿಸಬಾರದು ಅಥವಾ ಮತಾಂತರಿಸಲು ಪ್ರಯತ್ನಿಸಬಾರದು. ಆದಾಗ್ಯೂ, ೨೦೦೪ ರ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷದ ನೇತೃತ್ವದ ಒಕ್ಕೂಟದ ಸೋಲಿನ ನಂತರ ಜಯಲಲಿತಾ ನೇತೃತ್ವದ ತಮಿಳುನಾಡು ಸರ್ಕಾರವು ಕಾನೂನನ್ನು ರದ್ದುಗೊಳಿಸಿತು.

೨೦೦೩ ರಲ್ಲಿ ಗುಜರಾತ್ :ಗುಜರಾತ್ ಅಸೆಂಬ್ಲಿಯು ಮಾರ್ಚ್ ೨೦೦೩ ರಲ್ಲಿ ರಿಲಿಜನ್ ಸ್ವಾತಂತ್ರö್ಯ ಕಾಯಿದೆ-೨೦೦೩ ಅನ್ನು ಅಂಗೀಕರಿಸಿತು . ಇದನ್ನು ಧರಮ್ ಸ್ವತಂತ್ರತಾ ವಿಧೇಯ(ಧರ್ಮದ ಸ್ವಾತಂತ್ರö್ಯ ಕಾಯಿದೆ) ಎಂದು ಕರೆಯಲಾಯಿತು. ಆಗಿನ ರಾಜ್ಯದ ಮುಖ್ಯಮಂತ್ರಿ ಮತ್ತು ಇಂದಿನ ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ಈ ಕಾಯಿದೆಯನ್ನು ತಮ್ಮ ಸರ್ಕಾರದ ಒಂದು ವರ್ಷದ ಅಧಿಕಾರದ ಪ್ರಮುಖ 'ಸಾಧನೆ' ಎಂದು ಕರೆದರು.ಕಾನೂನು ಬಲವಂತವಾಗಿ ಅಥವಾ ಪ್ರೇರಣೆಯಿಂದ ಮತಾಂತರವನ್ನು ನಿಷೇಧಿಸಿದೆ.

೨೦೦೬ ರಲ್ಲಿ ಹಿಮಾಚಲ ಪ್ರದೇಶ : ಹಿಮಾಚಲ ಪ್ರದೇಶ ರಿಲಿಜನ್ ಸ್ವಾತಂತ್ರö್ಯ ಕಾಯಿದೆ- ೨೦೦೬ ಫೆಬ್ರುವರಿ ೧೮, ೨೦೦೭ ರಂದು ಜಾರಿಗೊಳಿಸಿತು. ರಾಜಸ್ಥಾನ ರಾಜ್ಯವು ೨೦೦೬ ರಲ್ಲಿ ರಾಜಸ್ಥಾನ ಎಂಬ ಹೆಸರಿನಿಂದ ಮತಾಂತರ ವಿರೋಧಿ ಮಸೂದೆಯನ್ನು ಅಂಗೀಕರಿಸಿತು.

೨೦೧೭ ರಲ್ಲಿ ಜಾರ್ಖಂಡ್ :೧೧ ಸೆಪ್ಟೆಂಬರ್ ೨೦೧೭ ರಂದು ಜಾರ್ಖಂಡ್ ರಿಲಿಜನ್ ಸ್ವಾತಂತ್ರö್ಯ ಕಾಯಿದೆ, ೨೦೧೭. ಬಲವಂತೆ ಅಥವಾ ಆಮಿಷ ಅಥವಾ ಮೋಸದ ವಿಧಾನಗಳಿಂದ ಮತಾಂತರ ಮಾಡುವುದನ್ನು ನಿಷೇಧಿಸುತ್ತದೆ. ನಿಬಂಧನೆಯನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು; ಪರಂತು, ಅಪ್ರಾಪ್ತ ವಯಸ್ಕ, ಮಹಿಳೆ ಅಥವಾ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಗೆ ಸಂಬAಧಿಸಿದAತೆ ಅಪರಾಧವನ್ನು ಎಸಗಿದರೆ, ಶಿಕ್ಷೆಯು ನಾಲ್ಕು ವರ್ಷಗಳವರೆಗೆ ಸೆರೆವಾಸ ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ (ಒಂದು ಲಕ್ಷ ರೂಪಾಯಿಗಳವರೆಗೆ) ದಂಡವನ್ನು ವಿಧಿಸಲಾಗುತ್ತದೆ..

೨೦೧೮ ರಲ್ಲಿ ಉತ್ತರಾಖಂಡ :ನವೆಂಬರ್ ೨೦, ೨೦೧೭ ರಂದು ಉತ್ತರಾಖಂಡದ ಹೈಕೋರ್ಟ್ ಮಧ್ಯಪ್ರದೇಶದಂತೆಯೇ ರಾಜ್ಯ ಸರ್ಕಾರವು ಮತಾಂತರ ವಿರೋಧಿ ಕಾನೂನನ್ನು ಜಾರಿಗೊಳಿಸಬೇಕು ಎಂದು ಸೂಚಿಸುವ ಹೇಬಿಯಸ್ ಕಾರ್ಪಸ್ ಅರ್ಜಿಯ ಸಂದರ್ಭದಲ್ಲಿ ತೀರ್ಪು ನೀಡಿತು. ಹೈಕೋರ್ಟ್ ಆದೇಶದ ನಾಲ್ಕು ತಿಂಗಳ ನಂತರ, ರಾಜ್ಯ ಸರ್ಕಾರವು ಮಾರ್ಚ್ ೨೧, ೨೦೧೮ ರಂದು ರಾಜ್ಯ ವಿಧಾನಸಭೆಯಲ್ಲಿ ಮಸೂದೆಯನ್ನು ಸಲ್ಲಿಸಿತು.ಮಸೂದೆಯನ್ನು ವಿಧಾನಸಭೆಯು ಅಂಗೀಕರಿಸಿತು ಮತ್ತು ಏಪ್ರಿಲ್ ೧೮, ೨೦೧೮ ರಂದು ರಾಜ್ಯಪಾಲರು ಅಂಕಿತ ಹಾಕಿದರು.

೨೦೨೦ ರಲ್ಲಿ ಉತ್ತರ ಪ್ರದೇಶ :ಉತ್ತರ ಪ್ರದೇಶ ಕಾನೂನುಬಾಹಿರ ರಿಲಿಜಿಯನ್ ಮತಾಂತರ ನಿಷೇಧ ಸುಗ್ರೀವಾಜ್ಞೆ- ೨೦೨೦ ಅನ್ನು ಯುಪಿ ಸರ್ಕಾರವು ೨೮ ನವೆಂಬರ್ ೨೦೨೦ ರಂದು ಅಂಗೀಕರಿಸಿತು, ಇದು ಇತ್ತೀಚಿನ ದಿನಗಳಲ್ಲಿ ಹೆಚ್ಚು ಚರ್ಚೆಯಲ್ಲಿರುವ ಕಾನೂನಾಗಿದೆ ಮತ್ತು ಲವ್ ಜಿಹಾದ್ ವಿರುದ್ಧದ ಕಾನೂನಾಗಿ ಪರಿಗಣಿಸಲಾಗುತ್ತಿದೆ. ಈ ಸುಗ್ರೀವಾಜ್ಞೆಯು ಅದರ ನಿಬಂಧನೆಗಳ ಉಲ್ಲಂಘನೆಗಾಗಿ ೧೦ ವರ್ಷಗಳವರೆಗೆ ಶಿಕ್ಷೆಯನ್ನು ಒದಗಿಸುತ್ತದೆ.

೨೦೨೨ ರಲ್ಲಿ ಕರ್ನಾಟಕ :ಕರ್ನಾಟಕ ರಿಲಿಜಿಯಸ್ ಸ್ವಾತಂತ್ರö್ಯ ಹಕ್ಕು ಸಂರಕ್ಷಣಾ ಅಧಿನಿಯಮ ೨೦೨೨ ಸೆಪ್ಟೆಂಬರ್ ನಲ್ಲಿ ಅಂಗೀಕಾರವಾಯಿತು. ಬಲವಂತ, ಆಸೆ-ಆಮಿಷ, ಪ್ರಭಾವ, ಒತ್ತಾಯ, ವಂಚನೆ ವಿಧಾನದ ಮೂಲಕ ಒಂದು ರಿಲಿಜನ್‌ನಿಂದ ಮತ್ತೊಂದಕ್ಕೆ ಮತಾಂತರ ನಿಷೇಧ.ಒಂದು ವೇಳೆ ಕಾನೂನನ್ನು

 Copyright @ 2025 Author

ಉಲ್ಲಂಘಿಸಿದರೆ ೩ ವರ್ಷಗಳ ಅವಧಿಯ ಆದರೆ ೫ ವರ್ಷಗಳವರೆಗ ವಿಸ್ತರಿಸಬಹುದಾದ ಜೈಲು ಶಿಕ್ಷೆ ಜೊತೆಗೆ ೨೫ ಸಾವಿರ ರೂ ದಂಡ.ಅಪ್ರಾಪ್ತ ಅಥವಾ ಅಸ್ವಸ್ಥಚಿತ್ತ ವ್ಯಕ್ತಿ, ಮಹಿಳೆ ಅಥವಾ ಅನೂಸೂಚಿತ ಪಂಗಡಕ್ಕೆ ಸೇರಿದ ವ್ಯಕ್ತಿಯ ಸಂದರ್ಭದಲ್ಲಿ ಮೂರು ವರ್ಷಗಳ ಅವಧಿಯ ಆದರೆ ೧೦ ವರ್ಷಗಳ ವರೆಗೆ ವಿಸ್ತರಿಸಬಹುದಾದ ಜೈಲು ಹಾಗೂ ೫೦,೦೦೦ ಜುಲ್ಮಾನೆ ವಿಧಿಸಲಾಗುತ್ತದೆ.
ಈ ಎಲ್ಲಾ ಕಾಯಿದೆಗಳು ಸೆಕ್ಯುಲರ್ ತತ್ವದ ಅಡಿಯಲ್ಲಿಯೇ ಸೃಷ್ಟಿಯಾಗಿರುವುದು ಕಂಡುಬರುತ್ತದೆ.ಏಕೆAದರೆ ಈ ಕಾಯಿದೆಗಳು ಮತಾಂತರದ ನಿಷೇಧವನ್ನು ಉಲ್ಲೇಖಿಸುವುದಕ್ಕಿಂತ ಬಲವಂತ, ಆಮಿಷ, ಮೋಸದ ವಿಧಾನಗಳಿಂದ ಮತಾಂತರ ಮಾಡುವುದಕ್ಕೆ ವಿರೋಧವಿದೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಹಾಗಾಗಿ ಈ ಕಾಯಿದೆಗಳ ಅನುಷ್ಠಾನವು ಸಹ ಅತ್ಯಂತ ಕಠಿಣವಾದ ಫಲಿತಾಂಶಗಳಿಗೆ ಕಾರಣವಾಗುವ ಸಾಧ್ಯತೆ ಕಡಿಮೆಯೇ ಸರಿ.

**೩. ಪ್ರಭುತ್ವದಪೂರ್ವಗ್ರಹಗಳು :**

ರಿಲಿಜನ್ ಸ್ವಾತಂತ್ರ್ಯದ ಹಕ್ಕಿನ ಹೆಸರಿನಲ್ಲಿ ಸ್ವತಂತ್ರವಾಗಿ ಪ್ರಚಾರ ಮಾಡುವುದು ಸಹ ಧಾರ್ಮಿಕ ಸಮಾನತೆಯೆಂಬತೇ ಪ್ರಭುತ್ವ ಭಾವಿಸುತ್ತಿದೆ.ಭಾರತದಂತಹ 'ಬಹುಸಂಖ್ಯಾತ ಪ್ರಜೆಗಳ ಸಂಪ್ರದಾಯಗಳಲ್ಲಿ ಮತಪರಿವರ್ತನೆಯ ಕಲ್ಪನೆಯೇ ಇಲ್ಲ. ಆ ಕೆಲವು ಅಲ್ಪಸಂಖ್ಯಾತ ರಿಲಿಜನ್ನುಗಳು ಮಾತ್ರವೇ ಈ ಪರಿವರ್ತನೆಯ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವ ಪರಿಸ್ಥಿತಿಯು ನಿರ್ಮಾಣವಾಗುತ್ತದೆ.' ಆದರೆ ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ರೀತಿ ಹೇಳುವ ಮೂಲಕ ಭಾರತದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ಮತಾಂತರ ಪ್ರಕ್ರಿಯೆಯು ನಡೆಯುತ್ತಿದೆ ಎಂಬ ನಿರ್ಣಯವನ್ನು ಮುಂದಿಡುತ್ತಾರೆ.
ಸಾಮಾಜಿಕ ನ್ಯಾಯದ ಹರಿಕಾರ ಬಸವಣ್ಣನವರು ಬ್ರಾಹ್ಮಣರಾಗಿ ಹುಟ್ಟಿ ಲಿಂಗಾಯತ ಧರ್ಮ ಸ್ಥಾಪನೆ ಮಾಡಿಲ್ಲವೇ?ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ಲಕ್ಷಾಂತರ ಜನರ ಜೊತೆಗೆ ಬೌದ್ಧ ಧರ್ಮಕ್ಕೆ ಮತಾಂತರ ಆಗಿಲ್ಲವೇ?ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಪಂಪ, ರನ್ನರು ಜೈನ ಧರ್ಮಕ್ಕೆ ಮತಾಂತರ ಗೊಂಡರು.ದೇಶದಲ್ಲಿ ಶತಮಾನಗಳ ಹಿಂದಿನಿAದಲೂ ಮತಾಂತರ ನಡೆದುಕೊಂಡು ಬಂದಿದೆ.ಸಾಮ್ರಾಟ್ ಅಶೋಕ ಹಿಂದೂ ಧರ್ಮದಿಂದ ಬೌದ್ಧ ಧರ್ಮಕ್ಕೆ ಹೋಗಿಲ್ಲವೇ?ಇವರಾರೂ ಅಧಿಕಾರವೋ ಅಥವಾ ಇನ್ಯಾವುದೋ ಕಾರಣಕ್ಕೆ ಮತಾಂತರ ಆಗಿಲ್ಲ ಎಂದು ಅವರು ಹೇಳಿದರು.
ಈ ಮೇಲಿನ ಹೇಳಿಕೆಯು ಕೆಲವು ಘನ ಪ್ರಶ್ನೆಗಳಿಗೆ ಹಾದಿಮಾಡಿಕೊಡುತ್ತದೆ.ಅದೇನೆಂದರೆ, ಶತಶತಮಾನಗಳಿಂದಲೂ ಮತಾಂತರ ಪ್ರಕ್ರಿಯೆಯಲ್ಲಿ ತೊಡಗಿರುವ ಭಾರತೀಯರು ಈಗೇಕೆ ಮತಾಂತರ ನಿಷೇದ ಮಾಡುವಂತೆ ಒತ್ತಾಯಿಸುತ್ತಿದ್ದಾರೆ?ಬಹುಸಂಖ್ಯಾತರಾಗಿರುವ ಅವರುಗಳೇಕೆ ಅಲ್ಪಸಂಖ್ಯಾತರಾದ ಕ್ರಿಶ್ಚಿಯನ್ನರು ಮತ್ತು ಮುಸ್ಲೀಮರನ್ನು ಬಲವಂತ, ಆಮಿಷ ಅಥವಾ ಮೋಸದಿಂದ ಮತಾಂತರ ಮಾಡಲು ಪ್ರಯತ್ನಿಸುತ್ತಿಲ್ಲ?
ಮತಾಂತರವು ಒಂದು ಸಮಸ್ಯೆಯಾಗಿ ಕಾಣುವುದು ಇಸ್ಲಾಂ ಮತ್ತು ಕ್ರಿಶ್ಚಿಯಾನಿಟಿಗಳು ಹಿಂದೂಯಿಸAನಿAದ ಜನರನ್ನು ಮತಾಂತರಗೊಳಿಸಲು ಪ್ರಯತ್ನಿಸಿದಾಗ ಮಾತ್ರ.ಮುಸ್ಲಿಂಮರನ್ನು ಕ್ರಿಶ್ಚಿಯಾನಿಟಿಗೋ ಅಥವಾ ಕ್ರಿಶ್ಚಿಯನ್ನರನ್ನು ಇಸ್ಲಾಂಗೋ ಮತಾಂತರಗೊಳಿಸುವಾಗಿನ ಸಮಸ್ಯೆ ಇದಲ್ಲ(ಷಣ್ಮುಖ,೨೦೨೨). ಹಾಗಾದರೆ, ಸೆಕ್ಯುಲರ್ಪ್ರಭುತ್ವವು ರಿಲಿಜನ್ನಿನ ಸ್ವಾತಂತ್ರ್ಯದ ಹೆಸರಿನಲ್ಲಿ ಮತಪ್ರಚಾರಕ್ಕೆ ಕೊಟ್ಟ ಅವಕಾಶವನ್ನು ಹಿಂದೂಗಳೇಕೆ ಬಳಸಿಕೊಳ್ಳುತ್ತಿಲ್ಲ, ಆ ಮೂಲಕ ಮತಾಂತರ ಮಾಡುತ್ತಿಲ್ಲ ಎಂಬುದಕ್ಕೆ ಇದುವರೆಗೂ ಪ್ರಭುತ್ವದ ಬಳಿ ಉತ್ತರವಿಲ್ಲವಾಗಿದೆ. ಮಾತ್ರವಲ್ಲ ಎಲ್ಲಾ ಕಾಲದಲ್ಲಿಯೂ ಭಾರತದಲ್ಲಿ ಮತಾಂತರ ಪ್ರಕ್ರಿಯೆ ಇತ್ತು ಎನ್ನುವ ಮೂಲಕ ಮತಾಂತರದ ಮೂಲ ಕಲ್ಪನೆಯ ಕುರಿತೇ ಅಜ್ಞಾನವನ್ನು ಪ್ರದರ್ಶಿಸುವ ಚಿಂತಕರ ಚಾವಡಿ ಮತ್ತು ರಾಜಕೀಯ ಧುರಿಣರು ಇದ್ದಾರೆ.ಅವರುಗಳು ಸೃಷ್ಟಿಸುವ ಕಾಯಿದೆಗಳು ಒಂದಷ್ಟು ತಪ್ಪು ತೀರ್ಮಾನಗಳನ್ನು ಆಧರಿಸಿವೆ.
ಹಿಂದೂ, ಜೈನ, ಬೌದ್ಧ ಪರಂಪರೆಗಳನ್ನು ರಿಲಿಜನ್ ಎಂದು ಪರಿಗಣಿಸುವಲ್ಲಿಯೇ ಮೂಲಭೂತವಾದ ದೋಷ ಅಡಗಿದೆ.ರಿಲಿಜನ್-ರಿಲಿಜನ್‌ಗಳ ನಡುವಿನ ಕನ್ವರ್ಶನ್ ಪ್ರಕ್ರಿಯೆ ಸಹಜ ಏಕೆಂದರೆ ಅದು ರಿಲಿಜನ್ನಿನ ಮೂಲಭೂತ ಗುಣ. ಆದರೆ ಭಾರತೀಯ ಈ ಪರಂಪರೆಗಳು ರಿಲಿಜನ್‌ಗಳಾಗಿರದ ಕಾರಣಕ್ಕಾಗಿ ಕನ್ವರ್ಶನ್ ಮಾಡುವುದು ಅವುಗಳ ಮೂಲಭೂತ ಗುಣವಾಗಿಲ್ಲ. ಹಾಗಾಗಿಯೇ ಭಾರತದಲ್ಲಿ ಕ್ರಿಶ್ಚಿಯಾನಿಟಿಯಂತಹ ರಿಲಿಜನ್‌ಗಳು ಮತಾಂತರ ನಿಷೇಧ ಕಾಯಿದೆಯನ್ನು ರಿಲಿಜನ್ ಸ್ವಾತಂತ್ರ್ಯಕ್ಕೆ ದಕ್ಕೆ ಎಂದು ಪರಿಗಣಿಸಿದರೆ, ಭಾರತೀಯ ಪರಂಪರೆಗಳು ಮತಾಂತರದ ಪ್ರಕ್ರಿಯೆಯೇ ಒಂದು ಪರಕೀಯ ಮತ್ತು ತಪ್ಪು ಎಂದು ಪರಿಗಣಿಸುತ್ತವೆ. ಏಕೆಂದರೆ ಭಾರತೀಯ ಪರಂಪರೆಗಳು ಮೋಕ್ಷಕ್ಕೆ ನೂರು ದಾರಿ ಎಂದು ವಾದಿಸಿದರೆ, ರಿಲಿಜನ್‌ಗಳು ತಮ್ಮದು ಮಾತ್ರವೇ ಸರಿಯಾದ ಮಾರ್ಗ ಎಂದು ವಾದಿಸುತ್ತದೆ.
ಪ್ರಭುತ್ವಗಳು ಈ ಕಡೆಗೆ ಸೆಕ್ಯುಲರ್ ತತ್ವಗಳಿಗೆ ಜೋತು ಬಿದ್ದು, ಸೆಕ್ಯುಲರ್ ತತ್ವದ ತಪ್ಪುಗ್ರಹಿಕೆಗಳನ್ನು ಮತ್ತಷ್ಟು ಮುಂದುವರೆಸುಲ್ಲಿ ಶ್ರಮವಹಿಸುತ್ತಿದೆ. ಹಾಗಾಗಿಯೇ ಕನ್ವರ್ಶನ್ ನಿಷೇದವಿಲ್ಲ, ಬದಲಾಗಿ

 Copyright @ 2025 Author

 ISSN: 2278-4632
Vol-15, Issue-01, No.02, January: 2025

ಬಲವಂತದ ಮತಾಂತರಕ್ಕೆ ಮಾತ್ರ ವಿರೋಧ ಎಂಬುದನ್ನು ಈ ಕಾಯಿದೆಗಳು ಒತ್ತಿ ಹೇಳುತ್ತವೆ. ಅಂದರೆ ಕನ್ವರ್ಶನ್ ಮಾಡುವುದು ರಿಲಿಜನ್‌ಗಳ ಮೂಲಭೂತ ಹಕ್ಕಾಗಿದ್ದು, ಭಾರತದಲ್ಲಿರುವ ಹಲವು ಪರಂಪರೆಗಳು ರಿಲಿಜನ್ನುಗಳಾಗಿರುವುದರಿಂದ ಎಲ್ಲರೂ ಈ ಪ್ರಕ್ರಿಯೆಗಳನ್ನು ಸಂವಿಧಾನಬದ್ದವಾಗಿ ನಿರ್ವಹಿಸಲು ಅರ್ಹರು ಎಂದೇ ಭಾವಿಸುತ್ತದೆ. ಈ ಪರಂಪರೆಗಳನ್ನು ರಿಲಿಜನ್‌ಗಳಿಗಿಂತ ಭಿನ್ನವಾದವುಗಳು ಎಂಬ ತೀರ್ಮಾನವನ್ನು ತೆಗೆದುಕೊಳ್ಳಲು ಪ್ರಭುತ್ವಕ್ಕೆ ಸದ್ಯಕ್ಕೆ ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿಯಲ್ಲಿದೆ(ಬಾಲಗಂಗಾಧರ, ೧೯೯೪). ಹೀಗೆ ಪ್ರಭುತ್ವದ ಈ ಎಲ್ಲಾ ಮಿತಿಗಳು ಕನ್ವರ್ಶನ್ ಪ್ರಕ್ರಿಯೆಯಲ್ಲಿ ಇನ್ನಷ್ಟು ಗೊಂದಲವನ್ನು ಸೃಷ್ಟಿಸಬಹುದೇ ಹೊರತು ಮತ್ತೇನನ್ನೂ ಮಾಡಲು ಸಾಧ್ಯವಿಲ್ಲ ಎಂಬುದು ನಮ್ಮ ಗಮನಕ್ಕೆ ಬರುತ್ತಲೆ ಇದೆ.

ಉಪಸಂಹಾರ:

ಭಾರತೀಯ ಸೆಕ್ಯುಲರ್ ಪ್ರಭುತ್ವವು ಸಂವಿಧಾನದಲ್ಲಿ ರಿಲಿಜನ್ ಸ್ವಾತಂತ್ರ್ಯದ ಹಕ್ಕನ್ನು ನೀಡುವ ಮೂಲಕ ಭಾರತದಲ್ಲಿರುವ ಎಲ್ಲಾ ಜನಸಮುದಾಯಗಳನ್ನು 'ವಿಭಿನ್ನ ರಿಲಿಜನ್ನು' ಗಳೆಂದು ಪರಿಗಣಿಸಿದ ಪರಿಣಾಮವೇ ಈ ಎಲ್ಲಾ ಅನಾಹುತಗಳಿಗೆ ಕಾರಣವಾಗಿದೆ.ರಿಲಿಜನ್ನುಗಳಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿದ ಸೆಕ್ಯುಲರ್ ಪ್ರಭುತ್ವವು ಭಾರತದಂತಹ ಸಮಾಜಗಳಿಗೆ ಮಾರಕವಾಗಿ ಪರಿಣಮಿಸಿದೆ. ಇದರಿಂದ ಸಮಸ್ಯೆಯಾಗುತ್ತಿರುವುದನ್ನು ಗಮನಿಸಿ, ಮತಾಂತರ ನಿಷೇಧ ಕಾಯಿದೆ ತಂದ ಸರ್ಕಾರಗಳು ಸಹ ಪರಿಣಾಮಕಾರಿ ಫಲಿತಾಂಶ ಪಡೆಯಲು ಸಾಧ್ಯವಾಗಲಿಲ್ಲ. ಏಕೆಂದರೆ, ಪ್ರಭುತ್ವದ ಸ್ವರೂಪವೇ ರಿಲಿಜನ್ನುಗಳು ತಮಗೆ ಬೇಕಾದ ಮಾರ್ಗವನ್ನು ಬಳಸಿ ಮತಾಂತರಿಸಲು ಅನುವು ಮಾಡಿಕೊಡುವಂತಿದೆ.ಇನ್ನೂ ಬಹುಸಂಖ್ಯಾತರು ವಿರೋಧಿಸುತ್ತಲೇ ಬಂದಿದ್ದರೂ ಪ್ರಭುತ್ವ ಅವರ ಬೇಡಿಕೆಯ ಹಿಂದಿರುವ ತಾತ್ವಿಕತೆಯನ್ನು ಅರ್ಥೈಸಲು ಸೋತಿದೆ. ಈ ಅರ್ಥದಲ್ಲಿ ಸೆಕ್ಯುಲರ್ ಪ್ರಭುತ್ವವೆಂದರೆ ರಿಲಿಜನ್ನಿನ ಪ್ರಭುತ್ವವೇ ಆಗಿದೆ.ಭಾರತಕ್ಕೆ ಪರಕೀಯವೇ ಆಗಿ ಉಳಿದಿದೆ.

**ಆಧಾರ ಗ್ರಂಥಗಳು :**

೧. ಯಂಡಿಗೇರಿ. ಕೆ ವೀರಣ್ಣ. ೨೦೨೦. ಭಾರತ ಸಂವಿಧಾನದ ಕಾನೂನು. ಬಿ. ಜೆ ಪ್ರಿಂರರ್ಸ್. ಧಾರವಾಡ.

೨. ಎ ಷಣ್ಮುಖ. ೨೦೨೨. ಭಾರತದಲ್ಲಿ ಸೆಕ್ಯುಲರ್‌ವಾದ ಮತ್ತು ಅದರ ವಿಮರ್ಶೆ. ವಸಂತ ಪ್ರಕಾಶನ. ಧಾರವಾಡ.

೩. ರಾಜರಾಮ್ ಹೆಗಡೆ. (ಅನು). ಎಸ್. ಎನ್. ಬಾಲಗಂಗಾಧರ.(ಮೂಲ) ೨೦೧೯. ಬೌದ್ಧಿಕ ದಾಸ್ಯದಲ್ಲಿ ಭಾರತ. ವಸಂತ ಪ್ರಕಾಶನ. ಧಾರವಾಡ.

೪. ಊ. ಏ. ಊಚಿಡಿshiಣh. ೨೦೨೪. ಅoಟಿsಣiಣuಣioಟಿಚಿಟiಣಥಿ oಜಿ ಂಟಿಣi-ಅoಟಿveಡಿsioಟಿ ಐಚಿತಿs iಟಿ Iಟಿಜiಚಿ: ಂಟಿ ಔveಡಿvieತಿ. Iಟಿಣeಡಿಟಿಚಿಣioಟಿಚಿಟ ಎouಡಿಟಿಚಿಟ oಜಿ ಐಚಿತಿ ಒಚಿಟಿಚಿgemeಟಿಣ & ಊumಚಿಟಿiಣies.

೫. ಅಟಚಿeಡಿhouಣ Sಚಿಡಿಚಿh.ಆe ಖooveಡಿ ಎಚಿಞob. ೨೦೦೫.ಖಿhe ಕಿuesಣioಟಿ oಜಿ ಅoಟಿveಡಿsioಟಿ iಟಿ Iಟಿಜiಚಿ.ಇಛಿoಟಿomiಛಿ ಚಿಟಿಜ Poಟiಣiಛಿಚಿಟ Weeಞಟಥಿ.ಒumbಚಿi.

೬. ಃಚಿಟಚಿgಚಿಟಿgಚಿಜhಚಿಡಿಚಿ, S. ಓ. ೧೯೯೪. ಊeಚಿಣheಟಿ iಟಿ ಊis ಃಟiಟಿಜಟಿess… ಓeತಿ ಆeಟhi: ಒಚಿಟಿohಚಿಡ Pubಟiಛಿಚಿಣioಟಿs.

 Copyright @ 2025 Author